ಅಧ್ಯಕ್ಷರು:– 2011ರ ಜನಗಣತಿಯಂತೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆಯ ಮಾಹಿತಿ ಲಭ್ಯವಿರುವುದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದೀರಿ.

ಶ್ರೀ ದಿನೇಶ್ ಗುಂಡೂರಾವ್:– ಹೌದು, ಜನಗಣತಿಯಲ್ಲಿ ಅವರು economic status ಹೇಳುವುದಿಲ್ಲ. ಆದ್ದರಿಂದ ಜನಗಣತಿಯ ಪ್ರಕಾರ ಅದು ಲಭ್ಯವಿರುವುದಿಲ್ಲ. Planning Commission ನವರು ಹೇಳುವಂತೆ ಅವರದ್ದೇ ಆದ ಮಾನದಂಡವಿದೆ. ಆಹಾರ ಭದ್ರತೆ ಕಾಯಿದೆ ಪ್ರಕಾರ ಕರ್ನಾಟಕ ರಾಜ್ಯಕ್ಕೆ ನಗರ ಪ್ರದೇಶಗಳಲ್ಲಿ 49% ಕೊಡಬಹುದು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 74% ಕೊಡಬಹುದು.

ಅಧ್ಯಕ್ಷರು:– ಸುಧಾಕರ್‌ರವರೆ, ನಿಮ್ಮಲ್ಲಿ ಒಂದು ವಿನಂತಿ ಏನೆಂದರೆ, ಇದೊಂದು ದೊಡ್ಡ ಪ್ರಶ್ನೆ ಆಗಿದೆ. ಇವುಗಳನ್ನು ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು. ಪ್ರಶ್ನೋತ್ತರದಲ್ಲಿ ಚರ್ಚೆ ಮಾಡುವುದಕ್ಕಿಂತ ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನೋಟೀಸ್ ಕೊಡಿ. ಅವಕಾಶ ಮಾಡಿಕೊಡುತ್ತೇನೆ.

ಡಾ॥ ಕೆ. ಸುಧಾಕರ್:– ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ. ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ.

ಅಧ್ಯಕ್ಷರು:– ಆಯಿತು, ಮಾಡೋಣ. ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಹಾಕಿಕೊಡುತ್ತೇನೆ.

ಜಮೀನು ದುರ್ಬಳಕೆ

32(675); ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಅ) ಇಂಡಿ ಪಟ್ಟಣದ ಬ್ಲಾಕ್ ನಂ: 582/ಬಿರಲ್ಲಿನ 1 ಇಕರೆ 30 ಗುಂಟೆ ಜಮೀನನ್ನು ಕುಷ್ಠರೋಗ ಮತ್ತು ಸಮುದಾಯ ಕಲ್ಯಾಣ ಕೇಂದ್ರಕ್ಕೆಂದು ಸಾರ್ವಜನಿಕ ಉದ್ದೇಶಕ್ಕಾಗಿ ಹಂಚಿಕೆ ಮಾಡಿದ್ದು ನಿಜವೆ;

ಆ) ಸದರಿ ಜಾಗವು ಈಗ ಯಾವ ಯಾವ ಸಂಘ ಸಂಸ್ಥೆಯು ಅಥವಾ ವ್ಯಕ್ತಿಗಳ ಹೆಸರಿನಲ್ಲಿ ನೊಂದಾಯಿಸಲಾಗಿದೆ;

ಇ) ಕುಷ್ಠರೋಗ ಮತ್ತು ಸಮುದಾಯ ಕಲ್ಯಾಣ ಕೇಂದ್ರಕ್ಕೆಂದು ಮಂಜೂರಾಗಿದ್ದ ಸದರಿ ಜಾಗವನ್ನು ಬೇರೆ ಉದ್ದೇಶಕ್ಕೆ ದುರ್ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ತನಿಖೆ ಮಾಡಲಾಗುತ್ತಿದೆಯೇ

ಈ) ಸದರಿ ಸಂಘವು ಸರ್ಕಾರದಿಂದ ನೋಂದಾಯಿಸಲ್ಪಟ್ಟಿದೆಯೇ; ಹಾಗೂ ಸರ್ಕಾರದ ನಿಯಮಗಳನ್ನು ಪಾಲಿಸಿದೆಯೇ; ಈ ಸಂಘವು ಯಾವಾಗ ನೊಂದಾಯಿಸಲ್ಪಟಿದೆ; ಇದರ ಉದ್ದೇಶವೇನು;

ಉ) ಸದರಿ ಉದ್ದೇಶಕ್ಕೆ ಮಂಜೂರಾಗಿದ್ದ ಜಾಗವನ್ನು ಬೇರೆ ಉದ್ದೇಶಕ್ಕೆ ದುರ್ಬಳಕೆ ಮಾಡಿದ ವ್ಯಕ್ತಿಗಳ ವಿರುದ್ದ ಮತ್ತು ಸರ್ಕಾರಿ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ;

ಊ) ಕೂಡಲೇ ಸದರಿ ಜಾಗವನ್ನು ತನಿಖೆ ಮಾಡಿ ಹಿಂದಕ್ಕೆ ಪಡೆಯಲಾಘುವುದೇ; ಈಗ ತನಿಖೆ ಯಾವ ಹಂತದಲ್ಲಿದೆ; ಸರ್ಕಾರ ಕೈಗೊಳ್ಳುವ ನಿಲುವುಗಳೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ಜಾಗವನ್ನು ವಿಜಾಪೂರ ಕುಷ್ಠರೋಗ ಮತ್ತು ಸಮುದಾಯ ಕಲ್ಯಾಣ ವಿಜಾಪೂರ, ಡಾ॥ ಹೆಚ್.ಟಿ. ಸಾಸನೂರ ಅವರ ಹೆಸರಿನಲ್ಲಿ ಖರೀದಿ ಮಾಡಿರುತ್ತಾಗೆ. ಈ ಸಂಘವು ಸರ್ಕಾರೇತರ ಸಂಸ್ಥೆಯಾಗಿದ್ದು, ರಿಜಿಸ್ಟ್ರಾರ್ ಆಫ್ ಕೋ–ಆಪರೇಟೀವ್ ಸೊಸೈಟಿಯಲ್ಲಿ ನೊಂದಣಿಯಾಗಿರುತ್ತದೆ.

ಆ), ಇ), ಈ), ಉ) ಮತ್ತು ಊ) ಉದ್ಭವಿಸುವುದಿಲ್ಲ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯ ಮಂತ್ರಿಯವರು ಒದಗಿಸಿದ್ದಾರೆ. ಆದರೆ, ಆ ಉತ್ತರ

ಸಮರ್ಪಕವಾಗಿಲ್ಲವೆಂದು ನಾನು ಈಗ ತಾನೆ 5 ನಿಮಿಷಗಳ ಮೊದಲು ಅವರ ಜೊತೆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಅವರಿಗೆ ಎಲ್ಲಾ ಮಾಹಿತಿಗಳನ್ನು ನಾನು ಒದಗಿಸಿಕೊಟ್ಟಿದ್ದೇನೆ. ಅದಕ್ಕೆ ಪರಿಹಾರವನ್ನು ಒದಗಿಸಿಕೊಡುತ್ತೇನೆ ಎನ್ನುವ ಮಾತನ್ನು ಅವರು ಕೊಟ್ಟಿದ್ದಾರೆ. ಆ ರೀತಿ ಅವರು ಮಾಡಿದರೆ ಸಾಕು. ಏಕೆಂದರೆ, ಯಾವ ಉದ್ದೇಶಕ್ಕಾಗಿ ಆ ಜಮೀನನ್ನು ಕೊಟ್ಟಿದ್ದರೋ ಅದು ದುರ್ಬಳಕೆಯಾಗುತ್ತಿದೆ.

ಅಧ್ಯಕ್ಷರು:– ಗೌಡ್ರೆ, ಒಂದು ನಿಮಿಷ. ಮಂತ್ರಿಯವರು ಏನು ಉತ್ತರ ಕೊಟ್ಟಿದ್ದಾರೆಂದರೆ, 'ಅವರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆಂದು' ಇದೆ. ಖರೀದಿ ಮಾಡಿದ್ದಾರೆಂದರೆ ಅದು ಅವರ ಸ್ವಂತ ಆಸ್ತಿ ಆಗುತ್ತದೆಯಲ್ಲವೇ?

ಅಧ್ಯಕ್ಷರು:– ಹಾಗಲ್ಲ, ಯಾವ ಯಾವ purpose ಗಾಗಿ Government ಅವರಿಗೆ ಕೊಟ್ಟಿತ್ತು ಎನ್ನುವುದನ್ನು ...

ಅಧ್ಯಕ್ಷರು:– Government ನದು ಅಲ್ಲ ಎಂದು ಇದೆ. ಮಂತ್ರಿಯವರು ಏನು ಹೇಳುತ್ತಾರೆನ್ನುವುದನ್ನು ಕೇಳೋಣ.

ಶ್ರೀ ಯು.ಟಿ. ಖಾದರ್:– ಕುಷ್ಠರೋಗ ಮತ್ತು ಸಮುದಾಯ ಕಲ್ಯಾಣ ಕೇಂದ್ರ, ಬಿಜಾಪುರ, ಇವರದೊಂದು ಕುಷ್ಠರೋಗ ಸಂಬಂಧ ಕೆಲಸ ಮಾಡುವಂಥ NGO ಸಂಸ್ಥೆಯಾಗಿದೆ. Private land ಅನ್ನು ಇವರು ತೆಗೆದುಕೊಂಡಿದ್ದಾರೆ. ಸರ್ಕಾರದಿಂದ, ನಮ್ಮ ಇಲಾಖೆಯಿಂದ ಯಾವುದೇ ಜಾಗವನ್ನು ಅವರಿಗೆ ಕೊಡಲಿಲ್ಲ.

ಅಧ್ಯಕ್ಷರು:– ಅವರು ಖರೀದಿ ಮಾಡಿದ್ದಾರೆ.

ಶ್ರೀ ಯು.ಟಿ. ಖಾದರ್:– ಅವರು ಖರೀದಿ ಮಾಡಿದ್ದಾರೆ.

ಅಧ್ಯಕ್ಷರು:– ಆಯಿತು.

ಶ್ರೀ ಯು.ಟಿ. ಖಾದರ್:– ಈಗ ಇಲ್ಲಿ ಮಾನ್ಯ ಶಾಸಕರ ಪ್ರಶ್ನೆ ಏನೆಂದರೆ, ಖರೀದಿ ಮಾಡುವಾಗ ಕುಷ್ಠರೋಗದ ನಿವಾರಣೆ ಸಲುವಾಗಿ ನಾವು ಕೆಲಸ ಮಾಡುತ್ತೇವೆಂದು ಆ ಒಂದು condition ಮೇಲೆ ಖರೀದಿ

ಮಾಡಿದ್ದಾರೆ, Revenue Department ಅವರಿಗೆ grant ಮಾಡಿದೆ. ಈಗ ಅದನ್ನು ಅವರು ಅವರ ಸ್ವಂತ ಹೆಸರಿಗೆ ಮಾಡಿಕೊಂಡಿದ್ದಾರೆಂದು ಮಾನ್ಯ ಶಾಸಕರು ನನ್ನ ಗಮನಕ್ಕೆ ಈಗ ತಂದಿದ್ದಾರೆ. ಆದಕಾರಣ, ಬಹುಶಃ ಈ ಒಂದು ಬೇಡಿಕೆಯನ್ನು ನಾವು ನಮ್ಮ ಇಲಾಖೆ ಮುಖಾಂತರ ಪರಿಶೀಲಿಸಿ ಯಾವ ಉದ್ದೇಶ, condition ಇಟ್ಟುಕೊಂಡು ಆ ಜಾಗವನ್ನು ಖರೀದಿ ಮಾಡಿದ್ದಾರೆ, ಅದು ತಪ್ಪು ಇದ್ದಲ್ಲಿ ಅದನ್ನು ತನಿಖೆ ಮಾಡಿ ಅದನ್ನು withdraw ಮಾಡಬೇಕೆಂದು ನಾವು Revenue Department ಗೆ ಬರೆಯುತ್ತೇವೆ.

ಅಧ್ಯಕ್ಷರು:– O.K ಗೌಡ್ರೆ, ನಿಮಗೆ ಒಂದು ವಿಷಯ ಹೇಳಿ ಬಿಡುತ್ತೇನೆ. ಇದು ಕಂದಾಯ ಎಂದರೆ revenue land ಖರೀದಿ ಮಾಡಿದ್ದಾರೆ. ಅದನ್ನು non-revenue purpose ಉಪಯೋಗ ಮಾಡುತ್ತಾ ಇದ್ದಿದ್ದರೆ ಆ ಪ್ರಶ್ನೆ ನೀವು ಕೇಳಿದರೆ Revenue Department ಅದರ ಮೇಲೆ action initiate ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಅದನ್ನೇ ಮಾನ್ಯ ಮಂತ್ರಿಯವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಅವರು ಯಾವ್ಯಾವ ಹೆಸರಿನಲ್ಲಿ ವೈಯಕ್ತಿಕ ವ್ಯಕ್ತಿಗಳು ಆಸ್ತಿ ಖರೀದಿ ಮಾಡಿದ್ದಾರೆ...

ಅಧ್ಯಕ್ಷರು:– ಆರೋಗ್ಯ ಇಲಾಖೆಯ ವ್ಯಾಪ್ತಿಯಲ್ಲಿ ಏನು ಬೇಕೋ ಅದನ್ನು ಅವರು ಮಾಡುತ್ತಾರೆ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಅಲ್ಲ ಸರ್, ಹೇಳಬೇಕಾದವರು ಇವರು ಎಂದರೆ ಆರೋಗ್ಯ ಇಲಾಖೆಯವರು. ಏಕೆಂದರ Leprosy Department ನಿಂದ ಹೇಳಬೇಕಾಗುತ್ತದೆ. ಕುಷ್ಠ ರೋಗಕ್ಕೆ ಅದು use ಆಗುತ್ತಿಲ್ಲ. ಯಾವ purpose ಗಾಗಿ ಕೊಟ್ಟಿದ್ದಾರೆ, ಆ purpose ಗೆ use ಆಗುತ್ತಿಲ್ಲವೆಂದರೆ ಅದನ್ನು ಮರಳಿಸಬೇಕಾಗುತ್ತದೆ (ವಾಪಸ್ಸು).

ಅಧ್ಯಕ್ಷರು:– ಗೌಡ್ರೆ, ನೀವು ತಿಳಿದುಕೊಳ್ಳಬೇಕು, ಅವರು ಖರೀದಿ ಮಾಡಿದ್ದಾರೆ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಹೌದು ಸರ್.

ಅಧ್ಯಕ್ಷರು:– ಖರೀದಿ ಮಾಡಿದ ಮೇಲೆ ಅವರು ಯಾವ ಉದ್ದೇಶಕ್ಕಾಗಿ ಖರೀದಿ ಮಾಡಿದ್ದಾರೋ ಅದು ಅವರಿಗೆ ಬಿಟ್ಟದ್ದು.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಆ NGO ರವರು ಖರೀದಿ ಮಾಡಿಕೊಂಡು ಮತ್ತೆ ಅವರು ವೈಯಕ್ತಿಕ ಆಸ್ತಿ ಮಾಡಿಕೊಂಡಿದ್ದಾರೆ. ಆ ಎಲ್ಲ documents ಅನ್ನು ನಾನು ಕೊಟ್ಟಿದ್ದೇನೆ.

ಅಧ್ಯಕ್ಷರು:– ಹಾಗಲ್ಲರೀ, ಅದು ಆ ರೀತಿ misuse ಆಗಿದ್ದರೆ ಇವರಿಗೆ ಅಂದರೆ ಆರೋಗ್ಯ ಇಲಾಖೆಗೆ ಬರುವುದಿಲ್ಲ. ಕಂದಾಯ ಇಲಾಖೆಯವರು...

ಶ್ರೀ ಯಶವಂತಗೌಡ ವಿಠ್ಠಲಗೌಡ ಪಾಟೀಲ್:– ನಾನು ಅದನ್ನೇ ಹೇಳಿದೆ. ಇದನ್ನು ಕಂದಾಯ ಇಲಾಖೆಯವರು ಮತ್ತು ಇವರ ಇಲಾಖೆಯವರು co-ordination ಮಾಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಯು.ಟಿ. ಖಾದರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಕಳಕಳಿಯ ಬೇಡಿಕೆ ಏನಿದೆ, ಯಾವ condition ಮೇಲೆ ತೆಗೆದುಕೊಂಡಿದ್ದಾರೆ, ಕುಷ್ಠರೋಗಕ್ಕೆ ಸಂಬಂಧಪಟ್ಟಂತೆ ಯಾವ ರೀತಿ ಕೆಲಸ ಮಾಡುತ್ತೇವೆಂದು ಹೇಳಿ grant ಪಡೆದುಕೊಂಡಿದ್ದಾರೆ ಎಂದು ತನಿಖೆ ಮಾಡಿ, ತಪ್ಪು ಇದ್ದಲ್ಲಿ ನಾವು revenue ಇಲಾಖೆಗೆ ಇದ್ದ ವಿಚಾರವನ್ನು ಬರೆಯುತ್ತೇವೆ.

ಅಧ್ಯಕ್ಷರು:– O.k. ಸಾಕು.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ತ್ವರಿತವಾಗಿ ಮಾಡಬೇಕು. ಇದೇ ವಿಚಾರ 2003ರಿಂದಲೂ ಉಳಿದಿದೆ. ಅದನ್ನು ಸ್ವಲ್ಪ ತ್ವರಿತವಾಗಿ ಮಾಡಲಿ.

ಅಧ್ಯಕ್ಷರು:– ಗೌಡ್ರೆ, ಅವರು ಖರೀದಿ ಮಾಡಿದ ಮೇಲೆ ಅದು ಅವರ ಸ್ವಂತ ಆಸ್ತಿ ಆಯಿತು. ಏನೆಂದರೆ, ಅದನ್ನು agriculture ಅಲ್ಲದೆ ಬೇರೆ ಉಪಯೋಗಕ್ಕೆ ಮಾಡಬೇಕಾದರೆ ಜಿಲ್ಲಾಧಿಕಾರಿಯವರ permission ಮುಂತಾದವೆಲ್ಲ ಬೇಕಾಗುತ್ತದೆ.

ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್:– ಸಂಬಂಧಪಟ್ಟ ಎಲ್ಲಾ documents ಅನ್ನು ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ.

ಅಧ್ಯಕ್ಷರು:– ಇದನ್ನು examine ಮಾಡಿ.

ಶ್ರೀ ಯು.ಟಿ. ಖಾದರ್:– ಆಯಿತು.

ಪ್ರಶ್ನೆ ಸಂಖ್ಯೆ: 33(654) ಶ್ರೀ ಪಿ. ರಾಜೀವ್ ರವರ ಪ್ರಶ್ನೆ ಬೇರೆ ಇಲಾಖೆಗೆ ವರ್ಗಾವಣೆ ಆಗಿದೆ.

ವಿಶ್ವಕರ್ಮ ಸಮುದಾಯದ ಅಭಿವೃದ್ಧಿ ಯೋಜನೆಗಳು

34(316); ಶ್ರೀ ಗೋಪಾಲಯ್ಯ ಕೆ.

ಅ) ರಾಜ್ಯದಲ್ಲಿರುವ ವಿಶ್ವಕರ್ಮ ಸಮುದಾಯದ ಸರಾಸರಿ ಜನಸಂಖ್ಯೆ ಎಷ್ಟು;

ಆ) ಈ ಸಮುದಾಯದವರ ಅಭಿವೃದ್ಧಿಗಾಗಿ ಸರ್ಕಾರ ಕ್ರಮಕೈಗೊಂಡ ಕ್ರಮಗಳೇನು;

ಇ) 2014–15ನೇ ಸಾಲಿನಲ್ಲಿ ಇಲ್ಲಿಯವರೆಗೆ ಯಾವ ಯಾವ ಯೋಜನೆಗಳನ್ನು ಈ ಸಮುದಾಯದವರಿಗೆ ಅನುಷ್ಠಾನಗೊಳಿಸಲಾಗಿದೆ;

ಈ) ಈ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಎಷ್ಟು ಹಾಗೂ ಈ ಯೋಜನೆಗಳಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) 1984ರಲ್ಲಿ ನಡೆದ ಸಮೀಕ್ಷೆ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 1.96ರಷ್ಟು ವಿಶ್ವಕರ್ಮ ಜನಾಂಗದ ಜನಸಂಖ್ಯೆ ಇರುವುದಾಗಿ ಉಲ್ಲೇಖಿಸಲಾಗಿದೆ. ಪ್ರಸ್ತುತ ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ವಿಶ್ವಕರ್ಮ ಸಮುದಾಯದ ಸರಾಸರಿ ಜನಸಂಖ್ಯೆ 12.55ಲಕ್ಷ ಎಂದು ಅಂದಾಜಿಸಬಹುದಾಗಿದೆ.